# ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಪುತ್ತೂರು ಉಪವಿಭಾಗ , ಪುತ್ತೂರು

ಪ್ರಕರಣದ ಸಂಖ್ಯೆ:ಎಡಿಸ್ ಆರ್.ಆರ್.ಟಿ.ಎಸ್.ಆರ್: 55/12-13

ದಿನಾಂಕ : 26 - 10 - 2016

ಉಪಸ್ಥಿತರು : ಡಾ. ರಾಜೇಂದ್ರ ಕೆ.ವಿ, ಭಾ.ಆ.ಸೇ.
ಉಪವಿಭಾಗಾಧಿಕಾರಿ
ಪುತ್ತೂರು ಉಪವಿಭಾಗ ಪುತ್ತೂರು

ಮೇಲ್ಮನವಿದಾರರು

1. ಶ್ರೀಮತಿ ಜಯಂತಿ ಎಚ್ ಪಕ್ಕಳ
ಕೋಂ ಬಿ. ಹರಿಶ್ಚಂದ್ರ ಪಕ್ಕಳ
Opp: I.B. ಮೈನ್ ರೋಡ್
ದರ್ಬೆ, ಪುತ್ತೂರು ದ.ಕ.
2. ಶ್ರೀ ಮೋಹನ್ ದಾಸ್ ರೈ
ಬಿನ್ ಕೆ.ಎಸ್. ವಿಠಲ್ ರೈ
ಮಿತ್ತಡ್ಕ ಮನೆ, ಬೆಟ್ಟಂಪಾಡಿ ಗ್ರಾಮ,
ಪಾಣಾಜೆ ಅಂಚೆ,
ಪುತ್ತೂರು ತಾಲೂಕು ದ.ಕ.
3. ಶ್ರೀಮತಿ ಆಶಾಲತಾ ಶೆಟ್ಟಿ
ಕೋಂ ಶಂಕರ್ ಶೆಟ್ಟಿ
'ಮಾನಸ' ಮನೆ,
ಅನುಷಾ ಎಂಟರ್ ಪ್ರೈಸಸ್ ಸಂತೋಷ್ ಬಿಲ್ಡಿಂಗ್ಸ್
ಕೈಕಂಬ, ಬಿ.ಸಿ.ರೋಡ್
ಬಂಟ್ವಾಳ ತಾಲೂಕು ದ.ಕ.
ನಂ 1 ರಿಂದ 3 ನೇ ಯವರ GPA Holder
ಶ್ರೀ ಬಿ. ಹರಿಶ್ಚಂದ್ರ ಪಕ್ಕಳ ಬಿನ್ ಎ.ಎಸ್. ಪಕ್ಕಳ
Opp: I.B. ದರ್ಬೆ ಪುತ್ತೂರು ದ.ಕ.
(ನ್ಯಾಯವಾದಿ ಶ್ರೀ ಶಿವಪ್ರಸಾದ್ E)

- ಮತ್ತು -

ಪ್ರತಿವಾದಿಯವರು

1. ಕುಂಞಲಿಮ್ಮ
2. ಬೀಪಾತುಮ್ಮ
3. ಐಸಾಬಿ
4. ಖತೀಜಮ್ಮ
5. ಮೊಹಮ್ಮದ್ ಕುಂಞ
6. ಅಬ್ದುಲ್ಲ.
ನಂ. 1 ರಿಂದ 6 ನೇ ಯವರು
ಬಿನ್ ದಿ| ಅಬ್ದುಲ್ಲ ಖಾದರ್ ಬ್ಯಾರಿ
ಮಿತ್ತಡ್ಕ, ಬೆಟ್ಟಂಪಾಡಿ ಗ್ರಾಮ ಮತ್ತು ಅಂಚೆ
ಪುತ್ತೂರು ತಾಲೂಕು ದ.ಕ.
7. ತಹಶೀಲ್ದಾರರು
ಪುತ್ತೂರು ತಾಲೂಕು ದ.ಕ.
8. ಕಂದಾಯ ನಿರೀಕ್ಷಕರು
ಪುತ್ತೂರು ಹೋಬಳಿ,
ಪುತ್ತೂರು ತಾಲೂಕು ದ.ಕ.
9. ಗ್ರಾಮಕರಣಿಕರು
ಬೆಟ್ಟಂಪಾಡಿ ಗ್ರಾಮ,
ಪುತ್ತೂರು ತಾಲೂಕು ದ.ಕ.

- - - - -

ಪ್ರಸ್ತಾವನೆ :

ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 136(2) ರನ್ವಯ ಪುತ್ತೂರು ತಾಲೂಕು ಬೆಟ್ಟಂಪಾಡಿ ಗ್ರಾಮದ MR: 68/2009-10 ದಿನಾಂಕ: 23-11-2009 ರಂತೆ ಪುತ್ತೂರು ತಹಶೀಲ್ದಾರರು ನೀಡಿದ ಆದೇಶ ಪ್ರಶ್ನಿಸಿ ಸಲ್ಲಿಸಿರುವುದಾಗಿದೆ.

ಮೇಲ್ಮನವಿದಾರರು ಈ ಮೇಲ್ಮನವಿಯಲ್ಲಿ ಪುತ್ತೂರು ತಾಲೂಕು ಬೆಟ್ಟಂಪಾಡಿ ಗ್ರಾಮದ ಸ.ನಂ. 325/1B, 325/3, 326/1A, 326/2A, 326/2C, 326/3, 327/1(P2), 327/2, 328/1B2 ಗಳನ್ನು MR: 68/2009-10 ದಿನಾಂಕ: 23-11-2009 ರಂತೆ ಪ್ರತಿವಾದಿಗಳಾದ 1 ರಿಂದ 6ನೇ ಯವರ ಹೆಸರುಗಳಲ್ಲಿ ಖಾತೆ ದಾಖಲಿಸಿರುವುದರ ವಿರುದ್ಧ ಈ ಮೇಲ್ಮನವಿ ಸಲ್ಲಿಸಿದೆ.

ಮೇಲ್ಮನವಿದಾರರ ತಂದೆ K.S. ವಿಠಲ ರೈಯವರು ಮೇಲಿನ ಜಮೀನುಗಳ ಗೇಣಿ ಒಕ್ಕಲಾಗಿದ್ದು ನಮೂನೆ - 7 ರಲ್ಲಿ ಡಿಕ್ಲರೇ ಸಲ್ಲಿಸಿದ್ದರು. ಪುತ್ತೂರು ಭೂ ನ್ಯಾಯ ಮಂಡಳಿಗೆ ಸಲ್ಲಿಸಿದ ಡಿಕ್ಲರೇಶನ್ ಪ್ರಕಾರ ದಿನಾಂಕ: 30-07-1981 ರಂದು ತೀರ್ಮಾನವ ಕೆಲವು ಜಮೀನುಗಳಿಗೆ ಪ್ರತಿವಾದಿ 1 ರಿಂದ 6 ರ ವರೆಗಿನವರ ತಂದೆಯವರಿಗೆ ಹಕ್ಕುಪತ್ರ ನೀಡಲಾಗಿತ್ತು. ಈ ಆದೇಶದ ವಿರು K.S. ವಿಠಲ ರೈ ಯವರು ಮಾನ್ಯ ಕರ್ನಾಟಕ ಉಚ್ಛ ನ್ಯಾಯಲಯದಲ್ಲಿ ನಂ. 22071/81 ರಂತೆ ರಿಟ್ ಮೇಲ್ಮನವಿ ಸಲ್ಲಿಸಿರುತ್ತಾರೆ. ಅದರಂತೆ ಮಾನ್ಯ ಉಚ್ಛ ನ್ಯಾಯಾಲಯದ ಆದೇಶ ದಿನಾಂಕ: 03-02-1983 ರಲ್ಲಿ ಪುತ್ತೂರು ಭೂ ನ್ಯಾಯ ಮಂಡಳಿಯ ಆದೇಶ ದಿನಾಂಕ: 30-07-1981 ನ್ನು ರದ್ದುಪಡಿಸಿ, ಮರು ತನಿಖೆಗೆ ಆದೇಶಿಸಿದಂತೆ ಭೂನ್ಯಾಯ ಮಂಡಳಿ ದಿನಾಂಕ: 07-09-87 ರಂದು ಮರು ಆದೇಶ ಮಾಡಿರುತ್ತದೆ. ಸದ್ರಿ ದಿನಾಂಕ: 07-09-87 ರ ಭೂ ನ್ಯಾಯ ಮಂಡಳಿಯ ಆದೇಶದ ವಿರುದ್ಧ ವಾದಿ - ಪ್ರತಿವಾದಿಯವರು ಪುತ್ತೂರು ಭೂ ಸುಧಾರಣಾ ಅಪಿಲೇಟ್ ಪ್ರಾಧಿಕಾರದಲ್ಲಿ LRAA: 178/87 ಮತ್ತು LRAA: 168/87 ರಂತೆ ಅಪೀಲು ಸಲ್ಲಿಸಿದ್ದರು ಹಾಗೂ ಈ ಅಪೀಲುಗಳು ರಿ.ಪಿ. ನಂ. 29026/91 ಮತ್ತು 22976/94 ಎಂಬುದಾಗಿ ಪರಿವರ್ತನೆಗೊಂಡು ದಿನಾಂಕ: 20-10-2005 ರಂದು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಇತ್ಯರ್ಥವಾಗಿ ಮರು ತನಿಖೆಯಿಂದ ಆದೇಶಿಸುವಂತೆ ಪುತ್ತೂರು ಭೂ ನ್ಯಾಯ ಮಂಡಳಿಗೆ ಮರು ರವಾನಿಸಿ ಆದೇಶವಾಗಿರುತ್ತದೆ. ದಿನಾಂಕ: 07-08-2009 ರಿಂದ ಪ್ರಕರಣವು ಪ್ರತಿವಾದಿಗಳ ಸಾಕ್ಷಿಗಳೊಂದಿಗೆ ವಿಚಾರಣೆಯಾಗಿರುತ್ತದೆ.

ಪ್ರಕರಣವು ವಿಚಾರಣೆಯಲ್ಲಿ ಬಾಕಿ ಇರುವ ಸಮಯ ಪ್ರತಿವಾದಿಗಳು ಖಾತಾ ಬದಲಾವಣೆಗೆ ಅರ್ಜಿ ಸಲ್ಲಿಸಿ (ಪುತ್ತೂರು ಭೂ ನ್ಯಾಯ ಮಂಡಳಿಯ ದಿನಾಂಕ: 30-07-1981 ಮತ್ತು 07-09-1987 ರ ಆದೇಶಗಳನ್ನು ಮಾನ್ಯ ಉಚ್ಛ ನ್ಯಾಯಾಲಯ ದಿನಾಂಕ: 20-10-2005 ರಂತೆ ವಜಾಗೊಳಿದ್ದರೂ) ಭೂ ನ್ಯಾಯ ಮಂಡಳಿ ಆದೇಶ ದಿನಾಂಕ: 30-07-1981 ರಂತೆ 29 ವರ್ಷಗಳ ಬಳಿಕ ಪ್ರತಿವಾದಿ 1 ರಿಂದ 6 ರವರ ಹೆಸರಲ್ಲಿ ಖಾತಾ ಬದಲಾವಣೆಯಾಗಿರುತ್ತದೆ.

ಈ ಕುರಿತು ಮೇಲ್ಮನವಿದಾರರು ದಿನಾಂಕ: 29-10-2010 ರಂದು ಆಕ್ಷೇಪಣೆ ಸಲ್ಲಿಸಿ ಆದೇಶದ ದೃಢೀಕೃತ ನಕಲಿಗಾಗಿ ಪ್ರಯತ್ನಿಸಿದರೂ ನಕಲುಗಳನ್ನು ನೀಡದೆ ದಿನಾಂಕ: 01-04-2011 ರಂದು ಅಪೇಕ್ಷಿತ ಕಡತ ಲಭ್ಯವಿಲ್ಲವೆಂದು ಹಿಂಬರಹ ನೀಡಿರುತ್ತಾರೆ. ಪ್ರಶ್ನಿತ ಆದೇಶದಂತೆ ಖಾತೆ ಬದಲಾವಣೆಯಾಗುವ ಮೊದಲು ಖಾತೆಯು ಲಕ್ಷ್ಮಿ ಹೆಂಗ್ಸು ಮತ್ತು ಕೆ.ಎಸ್. ವಿಠಲ ರೈ ಯವರ ಹೆಸರಲ್ಲಿತ್ತು. ಇವರ ಹೆಸರಿನಿಂದ ಖಾತೆ ಬದಲಾವಣೆ ಮಾಡುವಾಗ ಯಾವುದೇ ನೋಟೀಸುಗಳನ್ನು ಲಕ್ಷ್ಮಿ ಹೆಂಗ್ಸು ಹಾಗೂ K.S. ವಿಠಲ ರೈ ಯವರಿಗೆ ಜ್ಯಾರಿ ಮಾಡಿಲ್ಲ. ಪ್ರಕರಣವು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ತನಿಖೆಯಲ್ಲಿ ಬಾಕಿ ಇರುವಾಗ ಖಾತಾ ಬದಲಾವಣೆಯನ್ನು ಕಾನೂನು ಬಾಹಿರವಾಗಿ ಮಾಡಿರುವುದು ನ್ಯಾಯ ಬಾಹಿರ. ಇದನ್ನು ಪ್ರಶ್ನಿಸಿ ಬಾಧಿತರಾದ ಮೇಲ್ಮನವಿದಾರರು ಈ ಪ್ರಾಧಿಕಾರಕ್ಕೆ ಈ ಮೇಲ್ಮನವಿ ಸಲ್ಲಿಸಿರುವುದಾಗಿದೆ.

ವಿಳಂಬ ವಿನಾಯ್ತಿಗಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 52 ಹಾಗೂ ಕಾಲಮಿತಿ ಕಾಯ್ದೆ ಕಲಂ 5 ರಂತೆ ಪತ್ಯೇಕ ಅರ್ಜಿ ಸಲ್ಲಿಸಿರುತ್ತಾರೆ.

ಸದ್ರಿ ಮೇಲ್ಮನವಿಯನ್ನು ಪರಿಶೀಲಿಸಿ ವಿಚಾರಣೆಗೆ ಒಪ್ಪಿ ಮೇಲ್ಮನವಿದಾರರಿಗೆ ಮತ್ತು ಪ್ರತಿವಾದಿಯವರಿಗೆ ವಿಚಾರಣೆಗೆ ದಿನಾಂಕ: 11-07-2012 ರಂದು ಹಾಜರಾಗುವಂತೆ ನೋಟೀಸು ನೀಡಿ ಸಕಾರಣಗಳಿಗಾಗಿ ಮುಂದೂಡಲಾಗಿ ಅಂತಿಮವಾಗಿ ದಿನಾಂ: 15-06-2016 ರಂದು ವಿಚಾರಣೆಗೆ ಕೈಗೆತ್ತಿಕೊಂಡು ಆದೇಶಕ್ಕೆ ಕಾಯ್ದಿರಿಸಲಾಯಿತು.

ಸದ್ರಿ ಪ್ರಕರಣದ ಬಿಚಾರಣೆ ಸಮಯ ಪ್ರತಿವಾದಿಯವರು ಹಾಜರಾಗಿರುತ್ತಾರೆ. ಪ್ರತಿವಾದಿ ಪರ ನ್ಯಾಯವಾದಿಯವರು ತಮ್ಮ ಲಿಖಿತ ಹೇಳಿಕೆಯಲ್ಲಿ ಪ್ರತಿವಾದಿಗಳು ಅರ್ಜಿ ನೀಡಿದಂತೆ ಅವರ ಹೆಸರಲ್ಲಿ ಖಾತೆ ಬದಲಾವಣೆ ಮಾಡಲಾಗಿದೆ. ಪ್ರಶ್ನಿತ ಸ್ಥಳಗಳು ಪ್ರತಿವಾದಿಗಳ ಸ್ವಾಧೀನವಿರುತ್ತವೆ. ಇದು ಪ್ರತಿವಾದಿಗಳ ಗೇಣಿ ಜಮೀನಾಗಿರುತ್ತದೆ. ಆದುದರಿಂದ ಈ ಮೇಲ್ಮನವಿಯನ್ನು ತಿರಸ್ಕರಿಸುವಂತೆ ಕೋರಿ ವಾದ ಮಂಡಿಸುತ್ತಾರೆ.

ಮೇಲ್ಮನವಿದಾರರ ಪರ ನ್ಯಾಯ ವಾದಿಯವರು ಹಾಜರಾಗಿ ಮೇಲ್ಮನವಿಯ ಅಂಶಗಳನ್ನೇ ಪುರುಚ್ಚರಿಸುತ್ತಾ ಬೆಟ್ಟಂಪಾಡಿ ಗ್ರಾಮದ MR: 68/09-10 ದಿನಾಂಕ: 23-11-2005 ರಂತೆ ಸ.ನಂ. 325/1B, 325/3, 326/1A, 326/2P, 326/2C, 326/3, 327/1(P2), 327/2 ಮತ್ತು 328/1B2 ಜಮೀನುಗಳ ಖಾತೆಯನ್ನು ಪ್ರತಿವಾದಿ 1 - 6 ರ ವರೆಗಿನ ಪ್ರತಿವಾದಿಗಳ ಹೆಸರಲ್ಲಿ ಮಾಡಿರುವುದರ ವಿರುದ್ಧ ಸಲ್ಲಿಸಿರುವುದಾಗಿದೆ.

Raj

ಈ ಪ್ರಶ್ನಿತ ಜಮೀನುಗಳ ವಿಚಾರಣೆಯು ಪುತ್ತೂರು ಭೂ ನ್ಯಾಯ ಮಂಡಳಿಯಲ್ಲಿ ಮಾನ್ಯ ಉಚ್ಛ ನ್ಯಾಯಾಲಯದ ದಿನಾಂಕ: 20-10-2005 ರ ಆದೇಶದಂತೆ ಮರು ತನಿಖೆಯಲ್ಲಿರುವ ಸಮಯ ಪ್ರತಿವಾದಿಗಳು ನೀಡಿರುವ ಅರ್ಜಿ ಹಾಗೂ ಭೂ ನ್ಯಾಯ ಮಂಡಳಿಯ ಆದೇಶ ದಿನಾಂಕ: 30-07-1981 ರಂತೆ ಖಾತೆ ಬದಲಾವಣೆ ಮಾಡಿರುವುದು ಸರಿಯಲ್ಲ. ಆದ ಕಾರಣ ಪ್ರತಿವಾದಿ 1 ರಿಂದ 6ನೇ ಯವರ ಹೆಸರಲ್ಲಿ MR: 68/09-10 ದಿನಾಂಕ: 23-11-2005 ನೇ ಆದೇಶವನ್ನು ರದ್ದುಪಡಿಸಿ ಖಾತೆಯನ್ನು ಹಿಂದೆ ಇದ್ದಂತೆ ಲಕ್ಷ್ಮಿ ಹಾಗೂ K.S. ವಿಠಲ ರೈ ರವರ ಹೆಸರಲ್ಲೇ ಖಾತೆ ದಾಖಲಿಸಲು ಆದೇಶಿಸಿ ಪುತ್ತೂರು ತಹಶೀಲ್ದಾರರಿಗೆ ಸೂಕ್ತ ನಿರ್ದೇಶನ ನೀಡಲು ಕೋರಿರುತ್ತಾರೆ.

ಮೇಲ್ಮನವಿಯ ಎಲ್ಲಾ ಅಂಶಗಳನ್ನು ದಾಖಲೆಗಳನ್ನು ಪರಿಶೀಲಿಸಿದಾಗ ಪ್ರಕರಣವು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ತನಿಖೆಯಾಗಿ ರಿ.ಪಿ. ನಂ. 29026/91 ಮತ್ತು 22976/94 ರಂತೆ ದಿನಾಂಕ: 20-10-2005 ರಂತೆ ಪುತ್ತೂರು ಭೂ ನ್ಯಾಯ ಮಂಡಳಿ ಮರು ತನಿಖೆ ನಡೆಸುವಂತೆ ಆದೇಶಿಸಿದ್ದು, ಈ ಆದೇಶದಂತೆ ಪ್ರಕರಣ ತನಿಖೆಯಲ್ಲಿರುವಾಗಲೇ ಪ್ರತಿವಾದಿಗಳಿಗೆ LRYT: 2292/74-75 ದಿನಾಂಕ: 24-08-81 ರ ಭೂ ನ್ಯಾಯ ಮಂಡಳಿ ಆದೇಶದಂತೆ MR: 68/09-10 ದಿನಾಂಕ: 23-11-2009 ರಂತೆ ಖಾತಾ ಬದಲಾವಣೆಗೆ ಆದೇಶಿಸಿ ಅವರ ಹೆಸರಲ್ಲಿ ಖಾತೆ ದಾಖಲಾಗಿರುವುದು ಕಂಡು ಬರುತ್ತದೆ. ಪ್ರಕರಣದಲ್ಲಿ ಮಾನ್ಯ ಉಚ್ಛ ನ್ಯಾಯಾಲಯದ ಆದೇಶದಂತೆ ಭೂ ನ್ಯಾಯ ಮಂಡಳಿಯಲ್ಲಿ ಆದೇಶವಾಗುವ ಮೊದಲೇ ಪ್ರತಿವಾದಿಗಳ ಹೆಸರಲ್ಲಿ ಖಾತಾ ಬದಲಾವಣೆ ಮಾಡಿರುವುದನ್ನು ಮನಗಂಡು ಈ ಕೆಳಗಿನಂತೆ ಆದೇಶಿಸಿದೆ.

<u>ಆದೇಶ.</u>

ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಿದೆ.

ಪುತ್ತೂರು ತಾಲೂಕು ಬೆಟ್ಟಂಪಾಡಿ ಗ್ರಾಮದ MR: 68/09-10 ದಿನಾಂಕ: 23-11-2009 ರ ಆದೇಶ ರದ್ದುಪಡಿಸಿದೆ. ಹಾಗೂ ಈ ಆದೇಶದಲ್ಲಿ ಒಳಗೊಂಡ ಸ.ನಂ. 325/1B – 0.28 ಎಕ್ರೆ, 325/3 – 0.42 ಎಕ್ರೆ, 326/1A – 1.12 ಎಕ್ರೆ, 326/2A – 0.42 ಎಕ್ರೆ, 326/2C – 0.09 ಎಕ್ರೆ, 326/3 – 0.28 ಎಕ್ರೆ, 327/1 – 1.10 ಎಕ್ರೆ, 327/2 – 1.00 ಎಕ್ರೆ ಮತ್ತು 328/1B2 – 3.24 ಎಕ್ರೆ ಸ್ಥಳಗಳ ಪಹಣಿಯನ್ನು ಈ ಆದೇಶದ ಪೂರ್ವದಲ್ಲಿ ಇದ್ದಂತೆ ದಾಖಲಿಸಲು ಸೂಕ್ತ ಕ್ರಮ ಜರಗಿಸಲು ಪುತ್ತೂರು ತಹಶೀಲ್ದಾರರಿಗೆ ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟು ಬೆರಳಚ್ಚು ಪಡಿಸಿ, ಪರಿಷ್ಕರಿಸಿ ಈ ದಿನ ದಿನಾಂಕ: 26- 10 -2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.

Rajendra

(ಡಾ. ರಾಜೇಂದ್ರ ಕೆ.ವಿ, ಐ.ಎ.ಎಸ್.)
ಸಹಾಯಕ ಆಯುಕ್ತರು
ಪುತ್ತೂರು ಉಪವಿಭಾಗ, ಪುತ್ತೂರು ದ.ಕ.

ಪ್ರತಿ: ಮೇಲ್ಮನವಿದಾರರ ಪರ ನ್ಯಾಯವಾದಿ ಶ್ರೀ ಶಿವಪ್ರಸಾದ್ ಇ. ಪುತ್ತೂರು ಇವರ ಮುಖಾಂತರ ಜ್ಯಾರಿ.

ಪ್ರತಿ: 1 ರಿಂದ 6ನೇ ಪ್ರತಿವಾದಿಯವರಿಗೆ ನ್ಯಾಯವಾದಿ ಶ್ರೀ ಜಯಾನಂದ ಕೆ. ಇವರ ಮುಖಾಂತರ ಜ್ಯಾರಿ.

ಪ್ರತಿ: ತಹಶೀಲ್ದಾರರು ಪುತ್ತೂರು ತಾಲೂಕು ಇವರಿಗೆ ಕಡತ ಸಂಖ್ಯೆ MR: 68/09-10 ಪುಟಸಂಖ್ಯೆ 1 ರಿಂದ 46 ರ ತನಕ ಕಡತದೊಂದಿಗೆ ಸೂಕ್ತ ಕ್ರಮಕ್ಕಾಗಿ.